# ಹೋಲ್ಡರ್‌ಗೆ ಬೇಕಿದೆ ಧಿಗ್ಗನೆ ಹೊತ್ತಿಕೊಳ್ಳುವ ಬಲ್ಬು

**ಸೊರಗಿದ ವಿಂಡೀಸ್ ಕ್ರಿಕೆಟ್ ಅನ್ನು ಭುಜದ ಮೇಲಿಟ್ಟುಕೊಂಡ ಹೋಲ್ಡರ್ 'ನಮ್ಮೂರಿಗೂ ಬಂದು ಆಡಿ' ಎಂದು ಇಂಗ್ಲೆಂಡಿನವರಲ್ಲಿ ವಿನಂತಿಸಿಕೊಂಡಿದ್ದಾರೆ. ಟೆಸ್ಟ್ ಸರಣಿ ಸೋತಮೇಲೂ ಕ್ರಿಕೆಟ್ಟನ್ನು ಮತ್ತೆ ಮತ್ತೆ ಗೆಲ್ಲಬೇಕೆಂಬ ಅವರ ನುಡಿಧ್ವನಿ ಎಷ್ಟು ಅರ್ಥಪೂರ್ಣ. ಸ್ಟುವರ್ಟ್ ಬ್ರಾಡ್ ತರಹದ ಅಧ್ಯಾಯ ಅಲ್ಲೂ ಮೂಡುವುದು ಯಾವಾಗ?**

■ ವಿಶಾಖ ಎನ್.

ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯನ್ನು 1‑2ರಲ್ಲಿ ಸೋತ ನಂತರ ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ನಾಯಕ ಜೇಸನ್ ಹೋಲ್ಡರ್ ತಮ್ಮ ಸಹ ಆಟಗಾರರ ಆಟವನ್ನು ವಿಮರ್ಶೆಗೆ ಒರೆಗೆಹಚ್ಚಿದ ಬಗೆ ಕರುಳು ಚುರ್ರೆನ್ನಿಸುವಂಥದ್ದು. ವೆಸ್ಟ್ ಇಂಡೀಸ್ ತರಹದ ಸಣ್ಣ ದೇಶದಲ್ಲಿ ಕ್ರಿಕೆಟ್ ಮಕಾಡೆ ಮಲಗಿಕೊಂಡಿದೆ. ಅಲ್ಲಿ ದೇಸಿ ಕ್ರಿಕೆಟ್ ಆಡಿಸಲು ಹಣವಿಲ್ಲ. ಕ್ರಿಕೆಟ್ ಸಂಸ್ಥೆ ರೋಗಗ್ರಸ್ತವಾಗಿದೆ. ವಿಶ್ವದ ಘಟಾನುಘಟಿ ತಂಡಗಳ ಎದುರು ಟೆಸ್ಟ್ ಕ್ರಿಕೆಟ್ ಆಡುವ ಅವಕಾಶ ಸಿಗುವುದೇ ಈ ದಿನಮಾನದಲ್ಲಿ ತಮಗೆ ಸೌಭಾಗ್ಯ. ಇಂಗ್ಲೆಂಡ್ ತಂಡ ತಮ್ಮ ದೇಶಕ್ಕೂ ಈ ವರ್ಷದೊಳಗೆ ಬರುವ ಮನಸ್ಸು ಮಾಡಬೇಕು. ಬಂದು ಟೆಸ್ಟ್ ಕ್ರಿಕೆಟ್ ಸರಣಿ ಆಡಿ, ತಮ್ಮ ದೇಶದ ಕ್ರಿಕೆಟ್ಟನ್ನು ಉದ್ಧರಿಸಬೇಕು... ಹೀಗೆಲ್ಲ ಅವರು ಕೇಳಿಕೊಂಡರು.

ಎಮಿರೇಟ್ಸ್ ಓಲ್ಡ್ ಟ್ರಾಫೋರ್ಡ್‌ನಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದಲ್ಲಿ 269 ರನ್‌ಗಳ ಸೋಲುಂಡ ವಿಂಡೀಸ್ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಆಟ ನೋಡಿದ ಯಾರೇ ಆದರೂ ನಿಸ್ಸಂಶಯವಾಗಿ ಹೇಳುತ್ತಾರೆ. ಆದರೆ, ವಸ್ತುಸ್ಥಿತಿ ಮೇಲ್ನೋಟಕ್ಕೆ ನಿಲುಕುವಷ್ಟು ಸರಳವಾಗಿಲ್ಲ. ಶಾಯ್ ಹೋಪ್ ತರಹದ ಮೇಲಿನ ಕ್ರಮಾಂಕದ ಬ್ಯಾಟ್ಸ್‌ಮನ್ ಕೂಡ ತಣ್ಣಗೆ ಆಡಲು ಆ ತಂಡದಲ್ಲಿ ತಡಬಡಿಸುತ್ತಿರುವುದನ್ನು ಕಂಡಾಗ ಬೇರುಮಟ್ಟದಲ್ಲಿ ಇರುವ ಸಮಸ್ಯೆ ಅರಿವಾದೀತು.

ಇಂಗ್ಲೆಂಡ್–ವಿಂಡೀಸ್ ಟೆಸ್ಟ್ ಸರಣಿ, ಪ್ರವಾಸಿ ತಂಡವನ್ನು ಮರುಕದಿಂದ ನೋಡುವಂತೆ ಮಾಡಿರುವುದೇನೋ ನಿಜ. ಹಾಗೆಂದು ಅದನ್ನು ನೋವಿನ ದನಿಯಲ್ಲಿ ಅಷ್ಟೇ ಜೀರ್ಣಿಸಿಕೊಳ್ಳಬಾರದು. ಕೋವಿಡ್ ಕವಿದ ಆತಂಕದ ನೆರಳಿನ ಅಡಿಯಲ್ಲಿ ಎರಡು ತಂಡಗಳು ಆಡುವ ಧೈರ್ಯ ತೋರಿದವಲ್ಲ; ಅದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಮೊದಲ ಟೆಸ್ಟ್‌ನಿಂದ ತಂಡದಿಂದ ಹೊರಗುಳಿದು ಕೋಪದ ಕುದಿ ಹೊರಹಾಕಿದ್ದ ಸ್ಟುವರ್ಟ್ ಬ್ರಾಡ್, ಆನಂತರ ಎರಡು ಟೆಸ್ಟ್‌ಗಳಲ್ಲಿ ಕ್ರೋಧವನ್ನೇ ಆಟದ ತೀವ್ರತೆಯಾಗಿಸಿದ್ದನ್ನು ಕಂಡೆವು. ಹದಿಮೂರು ಹದಿನಾಲ್ಕು ವರ್ಷ ಟೆಸ್ಟ್ ಕ್ರಿಕೆಟ್ ಆಡಿ 500 ವಿಕೆಟ್ ಮೈಲುಗಲ್ಲನ್ನು ತಲುಪುವುದು ಕಷ್ಟ. ಬ್ರಾಡ್ ಅಂಥದೊಂದು ಬೆಳ್ಳಿಗೆರೆ ಮೂಡಿಸಿದರು. ಇಂಗ್ಲೆಂಡ್ ಪರವಾಗಿ ಜೇಮ್ಸ್ ಆ್ಯಂಡರ್ಸನ್ 589 ಟೆಸ್ಟ್ ವಿಕೆಟ್‌ಗಳನ್ನು ಖಾತೆಯಲ್ಲಿ ಇಟ್ಟುಕೊಂಡು ಈಗಲೂ ಚಿರಯುವಕನಂತೆ ಕಾಣುತ್ತಿದ್ದರೆ, 'ನಾನೂ ನಿನ್ನಂತೆಯೇ ಆಡುವೆ' ಎನ್ನುವ ಛಲದಂಕಮಲ್ಲನಂತೆ ಬ್ರಾಡ್ ಕಾಣುತ್ತಾರೆ. ಇವರಿಬ್ಬರೂ ಈಗ ಇಂಗ್ಲೆಂಡ್ ಪರವಾಗಿ




ವಿಂಡೀಸ್ ತಂಡವನ್ನು ಬಲಪಡಿಸುವ ಸವಾಲು ಹೆಣಗುತ್ತಿರುವ ಜೇಸನ್ ಹೋಲ್ಡರ್